**ಶಾಲೆಯನ್ನು ಮುಕ್ತ ವಾತಾವರಣವನ್ನಾಗಿ ರೂಪಿಸುವುದು**

**-ಸುಬೀರ್ ಶುಕ್ಲಾ**

**ಒಂದು ಶಾಲೆಯು ಈಗ ನಾವು ಯೋಚಿಸಿದಂತೆ ಇಲ್ಲದಿರಬಹುದು**

1995ರಲ್ಲಿ ಉತ್ತರಪ್ರದೇಶಕ್ಕೆ ಕೈಗೊಂಡ ಕ್ಷೇತ್ರ ಅಧ್ಯಯನ ಪ್ರವಾಸದ ವೇಳೆ ನಾನು ಒಂದು ಕುಗ್ರಾಮದ ಶಾಲೆಯೊಂದಕ್ಕೆ ಭೇಟಿ ನೀಡಿದೆನು. ಶಾಲೆಗಳ ಮೂಲಸೌಕರ್ಯ ಅಭಿವೃದ್ಧಿಗಾಗಿ ಅನುದಾನ ನೀಡುತ್ತಿದ್ದ ವಿಶ್ವಬ್ಯಾಂಕ್‌ನ ಯೋಜನೆಯೊಂದನ್ನು ಕೈಬಿಡಲಾಗಿದೆ ಎಂಬ ಸುದ್ದಿ ಆ ಸಮಯದಲ್ಲಿ ದಟ್ಟವಾಗಿ ಹಬ್ಬಿತ್ತು. ಅನುದಾನದ ಹರಿವು ನಿಂತುಹೋದರೆ ಶಾಲೆಯ ಮೂಲಸೌಕರ್ಯ ಹಿಂದೆ ಬೀಳುತ್ತದೆ ಎಂದು ಎಲ್ಲರೂ ಆತಂಕಗೊಂಡಿದ್ದರು. ಆದರೆ, ಶಿಕ್ಷಕರೊಬ್ಬರು ಹೇಳಿದ ಸಂಗತಿ ಶಿಕ್ಷಣದ ಬಗೆಗಿನ ನನ್ನ ದೃಷ್ಟಿಕೋನವನ್ನೇ ಬದಲಾಯಿಸಿತು. "ನನ್ನ ಶಾಲೆಯ ಬಗ್ಗೆ ನನಗೆ ಚಿಂತೆಯೇ ಇಲ್ಲ" ಎಂದು ಹೇಳಿದ ಅವರು, "ಯಾಕೆಂದರೆ, ನನ್ನ ಶಾಲೆ ಕಟ್ಟಡದಲ್ಲಿಯೋ, ಪೀಠೋಪಕರಣಗಳಲ್ಲಿಯೋ ಅಥವಾ ಪೂರೈಕೆಗಳಲ್ಲಿಯೋ ನಿಂತಿಲ್ಲ. ನನ್ನ ವಿದ್ಯಾರ್ಥಿಗಳು ಮತ್ತು ನನ್ನ ನಡುವೆ ಏನಾಗುತ್ತಿದೆ ಎಂಬುದರ ಮೇಲೆ ನನ್ನ ಶಾಲೆ ನಿಂತಿದೆ. ಜನರು ಬಂದು ಶಾಲೆಯ ಬಾಗಿಲುಗಳನ್ನು ಕಳಚಬಹುದು, ಬೇಕಿದ್ದರೆ ಇಟ್ಟಿಗೆಗಳನ್ನೂ. ಆದರೆ ಅವರು ನನ್ನ ಶಾಲೆಯನ್ನು ನಿರ್ನಾಮ ಮಾಡಲಾರರು" ಎಂದು ಆತ ದೃಢವಾಗಿ ಹೇಳಿದರು.

**ಪ್ರಬಲವಾದ ದೃಷ್ಟಿಕೋನ, ಅಲ್ಲವೇ?**

ಶಾಲೆಯನ್ನು ಶಾಲೆಯಾಗಿ ರೂಪಿಸಬೇಕಾದರೆ ಅಲ್ಲಿ ನಿಖರವಾಗಿ ಏನು ಆಗಬೇಕಾಗಿದೆ? ಎಂದು ನಮ್ಮನ್ನು ನಾವು ಕೇಳಿಕೊಳ್ಳಬೇಕಾಗಿದೆ. 'ಕಲಿಕೆ' ಎಂದಷ್ಟೇ ನಾವು ಹೇಳದೇ ಇರೋಣ. ಸಾಧ್ಯವಿರುವ ಎಲ್ಲಾ  ಕ್ರಿಯಾಪದಗಳನ್ನು ಬಳಸೋಣ. ಅಂದರೆ, ಮಾತನಾಡುವುದು, ಆಟ, ಕೆಲಸ, ಬರವಣಿಗೆ, ಕೇಳುವುದು, ಚಿತ್ರ ಬಿಡಿಸುವುದು, ಪ್ರಯೋಗ ಮಾಡುವುದು, ಸಂಪರ್ಕ, ಓದು, ವಿವರಿಸುವುದು, ವಿಚಾರಿಸುವುದು, ನಿರ್ದೇಶನ ನೀಡುವುದು, ಬಿಡಿಸಿ ಹೇಳುವುದು, ಪ್ರಯತ್ನಿಸುವುದು, ಉತ್ತೇಜಿಸುವುದು,

ವಿನಿಮಯ, ಭೇಟಿ, ಆವಿಷ್ಕಾರ, ವಾದಿಸು, ಕಾಳಜಿ ಮಾಡು, ರಚಿಸು, ಅಭಿಪ್ರಾಯಪಡು, ಒಪ್ಪು, ನೆರವಾಗು, ಸ್ಪರ್ಧೆ, ಶೋಧಿಸು, ಪ್ರತಿಬಿಂಬಿಸು, ಶ್ಲಾಘಿಸು, ಕೊಡು, ಮುನ್ನಡೆಸು, ಹಂಚು, ಖುಷಿಪಡು, ಇಷ್ಟಪಡದೇ ಇರು, ನಂಟು ಬೆಳೆಸು ಇತ್ಯಾದಿ. ಜೊತೆಗೆ ಇತರರನ್ನು ಒಳಗೊಳ್ಳದಿರುವಂತೆ ತೋರುವಂತಹವುಗಳು (ಉದಾಹರಣೆಗೆ 'ಪ್ರತಿಬಿಂಬಿಸು'), ಇತರರು ಹೇಳಿದ ಅಥವಾ ಮಾಡಿದ ಕಾರಣದಿಂದಾಗಿ, ಇತರರೊಂದಿಗೆ ಮಾಡಬಹುದು ಅಥವಾ ಮಾಡುವಂತೆ ಪ್ರಚೋದಿಸಬಹುದು.

ಇಲ್ಲಿನ ಬಹುತೇಕ ಕ್ರಿಯಾಪದಗಳು ಬೇರೆಯವರನ್ನು ಒಳಪಡಿಸಿಕೊಳ್ಳುವುದನ್ನು ಕಾಣುತ್ತೇವೆ: ಶಿಕ್ಷಕರು, ಸಹ ವಿದ್ಯಾರ್ಥಿಗಳು, ಶಾಲಾ ಸಿಬ್ಬಂದಿ ಮತ್ತು ಸಮುದಾಯದ ಸದಸ್ಯರು. ವಾಸ್ತವವಾಗಿ, ಶಾಲೆ ಎಂದರೆ, ಅವಶ್ಯವಾಗಿ ಸಂಬಂಧಗಳ ಕಂತೆಯಾದ ಜನರ ನಡುವೆ ಅಲ್ಲಿ ಏನು ಸಂಭವಿಸುತ್ತದೆ- ಅಂದರೆ ಮಕ್ಕಳ ಸರ್ವತೋಮುಖ ಅಭಿವೃದ್ಧಿಯನ್ನು ಖಾತರಿಪಡಿಸಲು ಒಂದಷ್ಟು ಪ್ರಕ್ರಿಯೆಗಳು ನಡೆಯುವ ಸ್ಥಳವದು.

ನಮ್ಮ ಬಾಲ್ಯವನ್ನು ನೆನಪಿಸಿಕೊಂಡರೆ, ಅಲ್ಲಿ ನಿಮಗೆ ಸ್ನೇಹಿತರ ಜೊತೆ ಕಳೆದ ಕ್ಷಣಗಳು, ಶಾಲೆಗೆ ಹೋಗಲು ನಿಮ್ಮ ಹೆತ್ತವರು ಸಹಕಾರ ನೀಡಿದ್ದು, ಶಿಕ್ಷಕರು ನಿಮ್ಮೊಂದಿಗೆ ಮಾತನಾಡಿದ್ದು, ಸಹಪಾಠಿಗಳೊಂದಿಗೆ ನೀವು ಪಾಲ್ಗೊಂಡ ಸಮಾರಂಭಗಳು ನೆನಪಾಗಬಹುದು. ವಾಸ್ತವವಾಗಿ, ಈ ಸಂಪರ್ಕಗಳು ಮತ್ತು ನಂಟುಗಳು ನಮ್ಮೊಂದಿಗೆ ಉಳಿಯುತ್ತವೆ.

**//ಬಾಕ್ಸ್//**

ಶಾಲೆಗಳು ಶುರುವಾಗುತ್ತಿದ್ದಂತೆ, ಕಲಿಕೆಯ ಮೌಲ್ಯಮಾಪನಗಳನ್ನು ಕೈಗೊಳ್ಳುವ ಬಗ್ಗೆ ಯೋಚಿಸುವುದು ತಪ್ಪು. ಇದು, ಶಾಲೆ ಎಂದರೆ, ಪ್ರಾಥಮಿಕವಾಗಿ, ಪರೀಕ್ಷೆಗಳಲ್ಲಿ ತೇರ್ಗಡೆಯಾಗಲು ಸಮರ್ಥರಾಗುವ ಮುಖ್ಯ ಉದ್ದೇಶಕ್ಕಾಗಿ ಮಕ್ಕಳು ಹೋಗುವ ಶೈಕ್ಷಣಿಕ ಸ್ಥಳ ಎಂಬ ಭಾವನೆ ಮೂಡಿಸುತ್ತದೆ. ಅಷ್ಟೇ ಸಮಾನವಾಗಿ, ಹೆಚ್ಚು ಅಲ್ಲ ಎಂದಾದರೂ, ಮಕ್ಕಳು ಸಾಮಾಜಿಕ ಸಂಬಂಧಗಳ ನೆಲೆಯಲ್ಲಿ ಯಾವುದನ್ನು ಕಳೆದುಕೊಂಡಿದ್ದಾರೆ ಎಂಬುದನ್ನು ಮತ್ತು ಅದು ಅವರ ಭಾವನಾತ್ಮಕ

ಬೆಳವಣಿಗೆ ಮತ್ತು ಮಾನಸಿಕ ಆರೋಗ್ಯದ ಮೇಲೆ ಬೀರಿರುವ ಪರಿಣಾಮವನ್ನು ಮುಖ್ಯವಾಗಿ ಅಳೆಯುವಂತಾಗಬೇಕು.

**//ಬಾಕ್ಸ್//**

**ಶಾಲೆಯ 'ಮುಕ್ತ ಸ್ಥಳ' ಮತ್ತು ಸಾಮಾಜಿಕ ಪಾತ್ರ'ದ ಮೌಲ್ಯ**

ಇದು, ಈ ಸಾಮಾಜಿಕ ಸಂವಹನಗಳು ತಮಗಷ್ಟೇ ಮಹತ್ವದ್ದು ಅಥವಾ ಇವೆಲ್ಲವೂ ಅದರಲ್ಲಿಯೇ ಇವೆ ಎಂದು ವಾದಿಸುವುದಕ್ಕಾಗಿ ಅಲ್ಲ. ಹಾಗಿದ್ದರೆ ಶುರು ಮಾಡೋಣ, ನಾವು ಅತಿಯಾಗಿ ಹೊಗಳುವ ಅಕಾಡೆಮಿಕ್ ಕಲಿಕೆಯನ್ನು ಸಾಧಿಸುವುದು ಸಾಮಾಜಿಕ ಅಂಶವನ್ನು ಪರಿಗಣಿಸದೆಯೇ ಅಸಾಧ್ಯ.

ವಿಗೋಟ್‌ಸ್ಕಿ ಮತ್ತು ಬರ್ನರ್ ಅವರಂತಹ ಸಿದ್ಧಾಂತಿಗಳು, ಶಿಕ್ಷಕರು ಮತ್ತು ವಿದ್ಯಾರ್ಥಿಗಳ ನಡುವೆ ಅಷ್ಟೇ ಅಲ್ಲ, ವಿದ್ಯಾರ್ಥಿಗಳು ತಮ್ಮೊಳಗೇ ಜ್ಞಾನವನ್ನು ಕಟ್ಟಿಕೊಡುವುದು ಹೇಗೆ ಸಾಮಾಜಿಕ ಪ್ರಕ್ರಿಯೆ ಎಂಬುದನ್ನು ನಮಗೆ ಪದೇಪದೇ ಹೇಳಿದ್ದಾರೆ. ವಿದ್ಯಾರ್ಥಿಗಳು ಪರಸ್ಪರ ಕೆಲಸ ಮಾಡುತ್ತಾ, ಯೋಚಿಸುತ್ತಾ, ಅಪರೂಪಕ್ಕೊಮ್ಮೆ ಶಿಕ್ಷಕರ ನೆರವು ಪಡೆಯುತ್ತಾ ಕಲಿಯುವಂತಹ ತರಗತಿಯ ವಾತಾವರಣವನ್ನು ಶಿಕ್ಷಕರು ಸೃಷ್ಟಿಸುವ ಪ್ರಕ್ರಿಯೆಯನ್ನೂ ಇದು ಒಳಗೊಳ್ಳುತ್ತದೆ. ಅದು ಪರಸ್ಪರರ ಯೋಜನೆಗಳ, ಚಿಂತನೆಗಳ ಮೇಲಾಟ, ಅನುಭವಗಳು ಮತ್ತು ದೃಷ್ಟಿಕೋನಗಳ ಹಂಚಿಕೆ ಮತ್ತು ಸಹಪಾಠಿಗಳ ನಡುವೆ ಪ್ರತಿಬಿಂಬಿಸುವುದು, ಈ ಮೂಲಕ ಹಿಂದಿನದ್ದಕ್ಕಿಂತ ಹೊಸ ಮತ್ತು ಫಲಪ್ರದವಾಗಿ ಅರ್ಥ ಮಾಡಿಕೊಳ್ಳಲು ದಾರಿ ಮಾಡಿಕೊಡುವುದು..

ಇಲ್ಲಿ, ಶಿಕ್ಷಕರು ವಹಿಸುವ ಸಿದ್ಧಾಂತಿಯ ಪಾತ್ರವು ಸಾಮಾಜಿಕದ್ದಾಗಿರುತ್ತದೆ. ಅಂದರೆ, ನಿಮಗೇನು ತಿಳಿದಿದೆಯೋ ಅದನ್ನು ಸೀದಾ ಪ್ರಸ್ತುತಪಡಿಸುವ ಬದಲು, ಮಕ್ಕಳಿಗೆ ಏನು ತಿಳಿದಿದೆ ಎಂಬುದನ್ನು ಗಮನಿಸುವುದು, ಅವರಿಗೆ ಅವಶ್ಯಕತೆ ಇದ್ದಾಗ, ಅವಶ್ಯಕತೆ ಇರುವ ಮಾಹಿತಿ ನೀಡುವುದು ಇಲ್ಲಿನ ನಿರೀಕ್ಷೆಯಾಗಿದೆ. ಉದಾಹರಣೆಗೆ, ಶಾಲೆಯ ಹತ್ತಿರದಲ್ಲಿರುವ ಜಮೀನಿನಲ್ಲಿ ಮಕ್ಕಳಿಗಾಗಿ ಒಂದು ಉದ್ಯಾನವನ್ನು ಅಭಿವೃದ್ಧಿಪಡಿಸಿ ಎಂದು ನೀವು ಹೇಳಬಹುದು. ಆ ಯೋಜನೆಯನ್ನು ಸಾಧ್ಯವಾದಷ್ಟು ವಿವರವಾಗಿ ನೀಡಿ, ಅದರ ವೆಚ್ಚದ ಬಗ್ಗೆಯೂ ಮಾಹಿತಿ ನೀಡಬಹುದು. ಇದನ್ನು ನಿಮ್ಮ ತಂಡದಲ್ಲಿ ಚರ್ಚಿಸಿ ಈ ದಿಸೆಯಲ್ಲಿ ಹೇಗೆ ಮುಂದುವರಿಯಬಹುದು ಎಂಬುದರ ಬಗ್ಗೆ ತೀರ್ಮಾನಿಸಿ ಎಂದು ಹೇಳಿ.

ಮುಂದಿನ ನಡೆಗಳನ್ನು ನೀವು ಊಹಿಸಬಹುದು. ಅವಶ್ಯ ಮಾಹಿತಿ, ಸಲಹೆ ನೀಡುವುದು ಇದ್ದೇ ಇರುತ್ತದೆ. ಜಾಗದ ಸುತ್ತಳತೆಯನ್ನು ಅಳೆಯುವುದು ಇರಬಹುದು, ಒಟ್ಟು ವೆಚ್ಚದ ಲೆಕ್ಕಾಚಾರ ಹಾಕುವುದು ಇರಬಹುದು ಅಥವಾ ಅದಕ್ಕೆ ಅಗತ್ಯವಿರುವ ರುಜುಗಳನ್ನು ಒಟ್ಟು ಮಾಡುವುದು ಇರಬಹುದು- ಹೀಗೆ ವಿದಾರ್ಥಿಗಳಿಗೆ ಅವಶ್ಯವಿರುವಾಗ ಮಾತ್ರ ಮಾರ್ಗದರ್ಶನ ನೀಡುವುದು. ಇದು, ಶಿಕ್ಷಕರನ್ನು ಪರಿವೀಕ್ಷಕರನ್ನಾಗಿ, ಸಾಂದರ್ಭಿಕ ಭಾಗೀದಾರರನ್ನಾಗಿ ಒಬ್ಬ ಜವಾಬ್ದಾರಿಯುತ ಬೆಂಬಲಿಗರನ್ನಾಗಿಸುತ್ತದೆ. ಬೇರೆ ಮಾತಿನಲ್ಲಿ ಹೇಳುವುದಾದರೆ, ಶೈಕ್ಷಣಿಕ ಪಾತ್ರವನ್ನೂ ನಿಭಾಯಿಸಬಲ್ಲ ಒಬ್ಬ ಸಾಮಾಜಿಕ ವ್ಯಕ್ತಿಯನ್ನಾಗಿಸುತ್ತದೆ. ಇವೆಲ್ಲವೂ, 'ನಿಗದಿತ ಪಠ್ಯವನ್ನು ಮುಗಿಸಲು' ನಮಗೆ ಸಹಾಯ ಮಾಡಬಲ್ಲದೇ? ಈ ಪ್ರಶ್ನೆಗೆ ಸಂಕ್ಷಿಪ್ತ ಉತ್ತರ- ಹೌದು. ನಾನು ಈ ಸಂಬಂಧ ಬೇರೊಂದು ಲೇಖನವನ್ನೇ ಬರೆದಿದ್ದೇನೆ. [i]

ಆದರೂ, ಇವೆಲ್ಲವುಗಳ ಜೊತೆಗೆ ಮಕ್ಕಳು ಸಾಮಾಜಿಕ ವ್ಯಕ್ತಿಗಳಾಗುವುದಕ್ಕೂ ಕಲಿಯುತ್ತಾರೆ. ಆಟದ ಮೈದಾನದ ಕುರಿತ ಚರ್ಚೆ ಅಥವಾ ಶಾಲೆಗೆ ರಸ್ತೆ ಮಾಡುವ ಬಗ್ಗೆ ಅಥವಾ ಬಸ್‌ನಲ್ಲಿ, ಮಧ್ಯಾಹ್ನದ ಊಟದ ವೇಳೆ ಅಥವಾ ನೀರಿನ ನಳ್ಳಿಯ ಹತ್ತಿರ- ಹೀಗೆ ಎಲ್ಲ ಕಡೆಯ ಸಂವಾದವೂ ಮಕ್ಕಳ ಬೆಳವಣಿಗೆಗೆ ಪೂರಕವಾಗುತ್ತವೆ. (ನೀವು ನಿಮ್ಮ ಬಾಲ್ಯದ ದಿನಗಳನ್ನು ನೆನಪಿಸಿಕೊಳ್ಳಬಹುದು ಮತ್ತು ಇಂತಹ ವಾತಾವರಣಗಳಲ್ಲಿ ನೀವು ಕಲಿತಿದ್ದುದನ್ನು ಪಟ್ಟಿ ಮಾಡಿ, ನಿಮ್ಮ ವ್ಯಕ್ತಿತ್ವ ಹೇಗೆ ಬೆಳವಣಿಗೆ ಆಯಿತು ಎಂದು ನೋಡಬಹುದು). ಈ ಹಿಂದೆ ಪ್ರಸ್ತಾಪಿಸಿದ 'ಸಾಮಾಜಿಕ ರಚನೆ'ಯಂತಹ ಜ್ಞಾನ ಮತ್ತು ಶಾಲೆಯಲ್ಲಿ ನಡೆಯುವ ಚರ್ಚೆಗಳು ಮಕ್ಕಳ ಭವಿಷ್ಯ ಕಟ್ಟುವಲ್ಲಿ ಅಂದರೆ, ಬದುಕಿನಲ್ಲಿ ಮತ್ತು ಇತರರೊಂದಿಗೆ ಕೆಲಸ ಮಾಡುವಲ್ಲಿ ಮಹತ್ವದ ಭೂಮಿಕೆಯಾಗುತ್ತದೆ. ಮಕ್ಕಳ ಭಾವನಾತ್ಮಕ ಬೆಳವಣಿಗೆಯಲ್ಲೂ ಅವು ಮಹತ್ವದ ಪಾತ್ರ ವಹಿಸುತ್ತದೆ. ಗಾಂಧಿ ಮತ್ತು ಟ್ಯಾಗೋರ್ ಅವರು, ಮಕ್ಕಳಿಗೆ ಇಂತಹ 'ಬುದ್ಧಿ, ಕೈ ಮತ್ತು ಹೃದಯ'ದ ಶಿಕ್ಷಣದ ಬಗ್ಗೆ ಮಾತನಾಡಿದ್ದರು. (ಕೈ- ಮಕ್ಕಳು ಕೆಲಸದಲ್ಲಿ ತೊಡಗಿಸಿಕೊಳ್ಳುವುದನ್ನು ಸೂಚಿಸುತ್ತದೆ). ವೈಯಕ್ತಿಕ ನೆಲೆಯಿಂದಾಚೆ ನಿಂತು ನೋಡುವುದಾದರೆ, ಮಕ್ಕಳು ಪರಸ್ಪರರೊಂದಿಗೆ ಬೆರೆಯುವುದನ್ನು ಕಲಿಯುವ ರೀತಿಯು ಕ್ರಿಯಾತ್ಮಕವಾದ ಪ್ರಜಾಸತ್ತಾತ್ಮಕ ಸಮಾಜದ ಅಡಿಪಾಯವನ್ನು ಕಟ್ಟಿಕೊಡಲಾರಂಭಿಸುತ್ತದೆ.

**--ಬಾಕ್ಸ್--**

ಕಳೆದ ಎರಡು ವರ್ಷಗಳಲ್ಲಿ ಕೊರೊನಾ ಸಾಂಕ್ರಾಮಿಕ ಕಾಯಿಲೆಯು ನಾವು ಪರಸ್ಪರ ಎಷ್ಟು ಅವಲಂಬಿತರು ಅಂದರೆ   ಬದುಕಲು ಮತ್ತು ಅಭಿವೃದ್ಧಿಗೆ ಎಷ್ಟು ಅವಲಂಬಿತರು ಎಂಬುದನ್ನು ಪದೇಪದೇ ನಿರೂಪಿಸಿದೆ. ನಾವು ಒಬ್ಬರ ಮೇಲೊಬ್ಬರು ಹೇಗೆ ಪರಿಣಾಮ ಬೀರುತ್ತೇವೆ ಎಂಬುದನ್ನು ಅರ್ಥ ಮಾಡಿಕೊಳ್ಳಲು ನಾವು ನಮ್ಮ ಮಿತಿ ಮೀರಿ ಪ್ರಯತ್ನಿಸುತ್ತೇವೆ ಮತ್ತು ಜಾಗತಿಕ ಸಮಾಜವಾಗಿ ಉಳಿಯಲು ನಾವು ಏನು ಮಾಡಬೇಕು ಎಂಬುದನ್ನು ಅರ್ಥ ಮಾಡಿಸಲು ಇಂತಹ ಅತಂತ್ರ ವಾತಾವರಣದ ಬದಲಾವಣೆಯೂ ಅತ್ಯಗತ್ಯವಾಗಿ ಬೇಕಾಗುತ್ತದೆ. ಪರಸ್ಪರರು ಒಂದೇ ರೀತಿಯ ಸಮಸ್ಯೆಗಳನ್ನು ಎದುರಿಸುತ್ತಿರುವಾಗ ಮತ್ತು ಕೆಲಸ ಮಾಡುತ್ತಿರುವಾಗ ಪರಸ್ಪರ ಸಹಕಾರ ಮತ್ತು ಸಹಯೋಗದ ಬಾಳ್ವೆಯಲ್ಲಿಯೇ ನಮ್ಮ ಭವಿಷ್ಯ ನಿಂತಿದೆ. ಬೇರೆಯವರ ಹಣದಲ್ಲಿ ನಾವು ಯಶಸ್ಸು ಪಡೆಯುವ ಜಾಯಮಾನವನ್ನು ಬದಿಗಿಟ್ಟು, ಒಟ್ಟಾಗಿ ಯಶಸ್ಸು ಪಡೆಯುವುದಕ್ಕಿಂತ ಬೇರೆ ಮಾರ್ಗವೇ ನಮ್ಮ ಮುಂದಿಲ್ಲ. ಅದು ತಾನಾಗಿ ಯಾವತ್ತಾದರೂ ಆಗಲಿ ಎಂದು ಬಿಟ್ಟುಬಿಡುವ ಬದಲಾಗಿ, ಇಂತಹ ಕಲಿಕೆಯನ್ನು ಬಲಪಡಿಸಲು ಶಾಲೆಗಿಂತ ಉತ್ತಮ ಸ್ಥಳ ಮತ್ತೊಂದಿಲ್ಲ.

-0—ಬಾಕ್ಸ್---

ಆದ್ದರಿಂದ, ಈಗ ನಾವು ಇಲ್ಲಿಂದ ಬೇರೆ ಎಲ್ಲಿ ಹೋಗೋಣ? ವಿಶೇಷವಾಗಿ ಚಿಕ್ಕ ಮಕ್ಕಳಿಗೆ, ಶಾಲೆಗಳ ಪುನರಾರಂಭವನ್ನು ಹೇಗೆ ನಿಭಾಯಿಸುತ್ತೇವೆ? ಈಗಿನ ದಿನಗಳಲ್ಲಿ ಅತ್ಯವಶ್ಯವಾಗಿರುವ, ಇಂತಹ ಮುಕ್ತ

ಸ್ಥಳಗಳನ್ನು ಸೃಷ್ಟಿಸುವ ನಿಟ್ಟಿನಲ್ಲಿ ನಾವು ಹೇಗೆ ಹೆಜ್ಜೆ ಇಡುತ್ತೇವೆ?

.

**ಮುಂದಿನ ತಿಂಗಳುಗಳಲ್ಲಿ ನಾವು ಏನು ಮಾಡಬೇಕು?**

ಮುಂದಿನ ತಿಂಗಳುಗಳಲ್ಲಿ ಹೆಚ್ಚುಹೆಚ್ಚು ಶಾಲೆಗಳು ತೆರೆಯುತ್ತವೆ. ಅಥವಾ ಮತ್ತೆ ಅವು ಮುಚ್ಚುವ ಸಂದರ್ಭವೂ ಎದುರಾಗಬಹುದು. ಹಾಗಾಗಿ, ತಕ್ಷಣದ ಮತ್ತು ದೀರ್ಘಕಾಲೀನ ಚರ್ಚೆಗಳನ್ನು ಹುಟ್ಟುಹಾಕಲು ಅದು ನೆರವಾಗಬಹುದು. ಕೊರೊನಾ ಸಾಂಕ್ರಾಮಿಕದ ಕಾರಣಕ್ಕೆ ಸುದೀರ್ಘ ಕಾಲ ಶಾಲೆ ಮುಚ್ಚಿರುವುದು ಶಾಲೆಗಳೆಂಬ ಸಾಮಾಜಿಕ ನೆಲೆಗಳನ್ನು ಪುನರಾರಂಭಿಸಲು ಉತ್ತಮ ಅವಕಾಶವನ್ನೂ ಒದಗಿಸಿದೆ.

**ಶಾಲೆಗಳ ಪುನರಾರಂಭದ ನೆಲೆಯಲ್ಲಿ...**

ಲಾಕ್‌ಡೌನ್‌ಗಳು ಮತ್ತು ಬಿಗಿನಿಯಮಗಳ ಅವಧಿಯಲ್ಲಿ ನಮ್ಮ ಮಕ್ಕಳನ್ನು ತಲುಪಲು ನಾವು ನಮ್ಮ ಹೆತ್ತವರು, ಸ್ವಯಂಸೇವಕರು ಮತ್ತು ಸಮುದಾಯಗಳ ಮೇಲೆ ಅವಲಂಬಿತರಾಗಿದ್ದೆವು. ಶಾಲೆಗಳನ್ನು ಪುನರಾರಂಬಿಸುವುದಕ್ಕೂ ಮುನ್ನ ನಾವು ಅವರೊಂದಿಗೆ ಚರ್ಚಿಸುವುದು ಸೂಕ್ತ. ಇಲ್ಲಿ ಕೆಲವು ಹೆಜ್ಜೆಗಳನ್ನು ಸೂಚಿಸಲಾಗಿದೆ-

-ಶಾಲೆ ಪುನರಾರಂಭಿಸುವುದಕ್ಕೂ ಮೊದಲು ಸಮುದಾಯಗಳ ಜೊತೆಗೆ ಶಾಲಾರಂಭದ ಯೋಜನೆಗಾಗಿ ಪೂರ್ವಭಾವಿ ಸಭೆ ನಡೆಸುವುದು, ಶಾಲೆಗಳಲ್ಲಿ ಸ್ವಚ್ಛತೆ ಮತ್ತು ಸುರಕ್ಷತಾ ಕ್ರಮಗಳ ಖಾತರಿಗಾಗಿ ಒಟ್ಟಾಗಿ ಕೆಲಸ ಮಾಡಬಹುದು. -ಮುಂಬರುವ ವಾರಗಳ ಬಗ್ಗೆ ನಿಮ್ಮ ಶೈಕ್ಷಣಿಕ ಯೋಜನೆ ಮತ್ತು ಸಮುದಾಯ ಏನು ಮಾಡಬೇಕೆಂಬುದನ್ನು ಸಮುದಾಯದ ಜೊತೆ ಹಂಚಿಕೊಳ್ಳುವುದು. ಇವೆಲ್ಲವುಗಳ ಜೊತೆಗೆ, ಸಮುದಾಯಗಳು ಶಾಲೆಗಳಲ್ಲಿ ಕೇವಲ ವ್ಯವಸ್ಥಾಪನಾ ವಿಚಾರಗಳಷ್ಟೇ ಅಲ್ಲದೆ ಜ್ಞಾನದ ಪಾಲುದಾರರಾಗಿಯೂ ಭವಿಷ್ಯದಲ್ಲಿ ಮಹತ್ವದ ಪಾತ್ರ

ವಹಿಸಬೇಕಾಗುತ್ತದೆ ಎಂಬುದನ್ನು ಅವರಿಗೆ ಒತ್ತಿ ಹೇಳುವುದು.

ಶಾಲೆ ಪುನರಾರಂಭದ ದಿನ ಮತ್ತು ನಂತರದ ಕೆಲವು ದಿನಗಳು ಮಹತ್ವಾಕಾಂಕ್ಷೆ ಮತ್ತು ಭರವಸೆ ಹುಟ್ಟಿಸುವುದು ಅತ್ಯವಶ್ಯವಾಗಿರುವ ಕಾರಣ ಈ ಕೆಲವು ಕ್ರಮಗಳನ್ನು ಕೈಗೊಳ್ಳಬಹುದು-

-'ಶಾಲೆ ಪುನರಾರಂಭ ಮೇಳ'- ಪೋಷಕರು ಮತ್ತು ಸಮುದಾಯಗಳ ಜೊತೆಗೆ, ಈಗ ನಾವು ಮತ್ತೆ ಜೊತೆಯಾಗಿ ಬಂದಿದ್ದೇವೆ ಎಂಬಂತೆ ಒಂದು ಸಂಭ್ರಮಾಚರಣೆ ಮಾಡುವುದು.

-ಕಳೆದ ಎರಡು ವರ್ಷಗಳ ಅನುಭವಗಳನ್ನು ಕುಟುಂಬಗಳು ವಿವರಿಸುವುದು.

-ಆರೋಗ್ಯ ಮತ್ತು ಸ್ವಚ್ಛತೆಯ ನಿಯಮಗಳನ್ನು ಪಾಲಿಸುವುದಕ್ಕೆ ಒಪ್ಪಿಕೊಳ್ಳುವುದು (ಮಕ್ಕಳ ಮೇಲೆ ಅದನ್ನುಹೇರಬೇಡಿ).

-ಮಕ್ಕಳಿಗೆ ಅವರ ಸ್ನೇಹಿತರ ಜೊತೆಗೆ ಇರಲು ಮತ್ತು ಆಟವಾಡಲು ಸಮಯಾವಕಾಶ ಕೊಡಿ; ಆರಂಭದ ಕೆಲವು ದಿನಗಳನ್ನು ಅನೌಪಚಾರಿಕವಾಗಿ ಕಳೆಯಲುಬಿಡಿ.

-ಪ್ರತಿಯೊಬ್ಬ ವಿದ್ಯಾರ್ಥಿಯ ಅನುಭವವನ್ನು ಕೇಳುತ್ತಾ ಸಮಯ ಕಳೆಯಿರಿ. ನಿಮ್ಮ ಅನುಭವಗಳನ್ನೂ ಹಂಚಿಕೊಳ್ಳಿ. ಈಗಿನ ಅನುಭವದಿಂದ ನಾವು ಕಲಿತದ್ದೇನು ಮತ್ತು ಮುಂದಿನ ಸಲ ಹೀಗಾದಾಗ ಏನು ಮಾಡಬಹುದು ಎಂಬುದನ್ನು ಚರ್ಚಿಸಿ.

-ಮಕ್ಕಳಲ್ಲಿನ ಕಲಿಕೆಯ ಪಾತ್ರದಲ್ಲಿ ಹೇಗೆ ಬದಲಾವಣೆಯಾಗುತ್ತಿದೆ, ಮುಂದಿನ ವರ್ಷ ನಾವು ಪರಸ್ಪರ ಹೇಗೆ ಸಹಕಾರ ನೀಡಬಹುದು ಎಂಬುದನ್ನು ಹಂಚಿಕೊಳ್ಳಿ. ಅವರು ಕೈಗೊಳ್ಳಬಹುದಾದ ಉಪಕ್ರಮಗಳನ್ನು ಪ್ರದರ್ಶಿಸಿ, ತಮ್ಮ ತಮ್ಮ ಸ್ನೇಹಿತರಿಗೆ ಸಹಕಾರ ನೀಡುವ ಬಗ್ಗೆ ಮತ್ತು ಪ್ರತಿಯೊಬ್ಬರ ಕಲಿಕೆ, ಪಾತ್ರಗಳು ಮತ್ತು ಅನುಭವಗಳ ದಾಖಲೆಗಳನ್ನು ಉಳಿಸಿಕೊಳ್ಳಿ.

-ಮಕ್ಕಳು ಯಾವ ವಿಭಾಗದಲ್ಲಿ/ ವಿಷಯದಲ್ಲಿ ದುರ್ಬಲರು ಎಂದು ಅನಿಸುತ್ತದೆಯೋ ಆ ಸಂಬಂಧ ಅವರೊಂದಿಗೆ ಚರ್ಚಿಸಿ, ನೀವು ಹೊಂದಿರುವ ಬೋಧನೆ ಮತ್ತು ಕಲಿಕೆಯ ಯೋಜನೆಯನ್ನು ಅವರೊಂದಿಗೆ ಹಂಚಿಕೊಳ್ಳಿ. ಆದರೆ ಈ ಎಲ್ಲಾ ಹಂತಗಳಲ್ಲಿ ಶೈಕ್ಷಣಿಕ ನಿಯಮ/ಶಿಷ್ಟಾಚಾರಗಳನ್ನು ಪಾಲಿಸುವುದನ್ನು ಮರೆಯಬೇಡಿ.

-ಮಕ್ಕಳನ್ನು ವಿಶ್ವಾಸಕ್ಕೆ ತೆಗೆದುಕೊಂಡು, ಬೋಧನೆ ಮತ್ತು ಕಲಿಕೆಯ ಪ್ರಕ್ರಿಯೆಯನ್ನು ಪೂರ್ಣ ಪ್ರಮಾಣದಲ್ಲಿ ಆರಂಭಿಸಬೇಕಾಗಿರುವ ಕಾರಣ ನೀವು ಎಲ್ಲಿದ್ದೀರಿ ಎಂಬುದನ್ನು ತಿಳಿದುಕೊಳ್ಳಬೇಕೆಂದು ಹೇಳಿರಿ. -ಅಂತಿಮವಾಗಿ, ಅವರ ಅನುಮತಿ ಮತ್ತು ಭಾಗವಹಿಸುವಿಕೆಯ ಆಸಕ್ತಿಯನ್ನು ಖಚಿತಪಡಿಸಿಕೊಂಡು ನಿಮ್ಮ ಕೆಲಸಗಳನ್ನು ಕೈಗೆತ್ತಿಕೊಳ್ಳಿ.

**ಮರು-ವಿನ್ಯಾಸಗೊಂಡ/ ಮರು ಮಾದರಿಗೊಂಡ ಶಾಲೆಯತ್ತ**

ಈಗ, ಬಲವಾದ ಮತ್ತು ದ್ವಿಮುಖ ಸಂಬಂಧಗಳನ್ನು ಒಳಗೊಂಡ ಸದೃಢ ಆರಂಭದ ಹೊಸ್ತಿಲಲ್ಲಿದ್ದೀರಿ. ಇದನ್ನು ನೀವು ಹೇಗೆ ಮುಂದೆ ತೆಗೆದುಕೊಂಡು ಹೋಗುತ್ತೀರಿ? ಈ ಯೋಚನೆಗೆ ಬಹುಶಃ ಈ ಕೆಳಗಿನ ಹಂತಗಳು ನೆರವಾಗಬಲ್ಲವು-

ಒಂದನೇ ಹಂತ- ಶಾಲೆ ಪುನರಾರಂಭವನ್ನು ಹೊಸ ಪಯಣದ ಆರಂಭವೆಂಬಂತೆ ಬಳಸಿಕೊಳ್ಳಿ.

-ಪಠ್ಯಪುಸ್ತಕ ಮತ್ತು ಕಲಿಕಾ ಸಾಮಗ್ರಿಗಳನ್ನು ಆಸಕ್ತಿದಾಯಕ ರೀತಿಯಲ್ಲಿ ಪರಿಚಯಿಸಿ. ಉದಾಹರಣೆಗೆ- ಪಠ್ಯ ಪುಸ್ತಕದ ಬಗ್ಗೆ ಒಂದು ರಸಪ್ರಶ್ನೆಯನ್ನು ಏರ್ಪಡಿಸಬಹುದು, ಯಾವುದು ದೀರ್ಘವಾದ ಪಾಠ, ಯಾವ ಪದ ಹೆಚ್ಚು ಬಾರಿ ಬಳಕೆಯಾಗಿದೆ (ಉದಾಹರಣೆಗೆ 'ಬಲ' ಅಥವಾ ಬೆಳಕು), ಉದ್ದವಾದ ಪ್ರಶ್ನೆ ಯಾವುದು- ಹೀಗೆ.

-ಮುಕ್ತವಾಗಿ ಕೊನೆಗೊಳ್ಳುವ ಪ್ರಶ್ನೆಗಳ ಸದುಪಯೋಗದೊಂದಿಗೆ ಆರಂಭಿಸಿ. (ಬೇಕಿದ್ದರೆ, ಇವುಗಳು ಏನು ಎಂದು ತಿಳಿದುಕೊಳ್ಳಿ ಮತ್ತು ಅವುಗಳನ್ನು ಬೇರೆಬೇರೆ ವಿಷಯಗಳಿಗೆ ಮತ್ತು ತರಗತಿಗಳಿಗೆ ಹೇಗೆ ಅನ್ವಯಿಸಬಹುದು ಎಂದು ತಿಳಿದುಕೊಳ್ಳಿ).-ಬೋಧನೆ ಮತ್ತು ಕಲಿಕೆಯ ಪ್ರಕ್ರಿಯೆಯನ್ನು ಹೆಚ್ಚುಹೆಚ್ಚು 'ಮುಕ್ತ'ವಾಗಿಸಲು ಯತ್ನಿಸಿ; ಮೌಖಿಕ ಕಾರ್ಯಗಳನ್ನು ಎಲ್ಲರೂ ಹೆಚ್ಚಾಗಿ ಒಟ್ಟಾಗಿ ಮಾಡುವಂತೆ ಪ್ರೇರೇಪಿಸಿ, ಆಮೇಲೆ ತಂಡಗಳಲ್ಲಿ ಓದುವ-ಬರೆಯುವ ಪ್ರಕ್ರಿಯೆಯನ್ನು ಕೈಗೆತ್ತಿಕೊಳ್ಳಿ; ಅಂತಿಮವಾಗಿ ಸಾಮಗ್ರಿಗಳು ಅಥವಾ ಸಲಕರಣೆಗಳ ನೆರವು ಬಳಸಿಕೊಳ್ಳಿ. (ಉದಾಹರಣೆಗೆ, ಈ ಅನುಕ್ರಮ ಯಾಕೆ? ಊಹಿಸಿ!).

-ಮಕ್ಕಳಿಗೆ ಗುರಿಗಳನ್ನು ನಿಗದಿಪಡಿಸಿ- 'ಕಲಿಕಾ ಪುನಶ್ಚೇತನ' ಪ್ರಕ್ರಿಯೆಯನ್ನು ಪರಸ್ಪರ ಸಹಭಾಗಿತ್ವದಲ್ಲಿ ರೂಪಿಸಿ; ಬೇರೆಬೇರೆ ಹಂತದಲ್ಲಿ ಗುಂಪಿನಲ್ಲಿ ಮತ್ತು ಗುಂಪುಗಳ ಮಧ್ಯ ಕೆಲಸ

ಮಾಡಲು ಹೇಳಿ.

-ಗುರಿ ನಿಗದಿಪಡಿಸಿಕೊಳ್ಳುವಂತೆ ಮಕ್ಕಳನ್ನು ಹುರಿದುಂಬಿಸಿ ಮತ್ತು ಅವರೇ ತಮ್ಮ ತಮ್ಮ ಕೆಲಸಗಳನ್ನು ಪರಿಶೀಲಿಸಿಕೊಳ್ಳುವಂತೆ ಹೇಳಿ.

- ಕ್ರಿಯಾಶೀಲತೆಯನ್ನು ಹೆಚ್ಚಿಸಿ, ಆಲೋಚನೆ, ವಿಶ್ಲೇಷಣೆ, ನಿರ್ಧಾರ ತೆಗೆದುಕೊಳ್ಳುವುದು, ಶೈಕ್ಷಣಿಕ ಪ್ರಾವೀಣ್ಯವನ್ನು ಗಳಿಸಲು ಬೇಕಾದ ಕಲಿಕಾ ಕೌಶಲ್ಯ ಮತ್ತು ಭಾಷಾ ಕೌಶಲ್ಯವನ್ನು ಹೆಚ್ಚಿಸಿಕೊಳ್ಳುವ ಮೂಲಕ ಮಕ್ಕಳನ್ನು ಸ್ವಯಂ ಕಲಿಕೆಗೆ ಸಜ್ಜುಗೊಳಿಸಿ. (ಈ ಸಂಬಂಧ ಚಟುವಟಿಕೆಗಳಿಗೆ ಅಂತರ್ಜಾಲದ ನೆರವು ಪಡೆಯಬಹುದು). [ii]

**ಎರಡನೇ ಹಂತ- ಸ್ವಾಯತ್ತತೆಯತ್ತ ಆದರೆ ಸಾಮಾಜಿಕವಾಗಿ ಬೆಸೆದ ಕಲಿಕಾರ್ಥಿಗಳು**

-ಪಠ್ಯಪುಸ್ತಕಗಳನ್ನು ಜೊತೆಗೆ ಓದಲು ವಿದ್ಯಾರ್ಥಿಗಳಲ್ಲೇ ಸ್ವ-ಸಹಾಯ ಗುಂಪುಗಳನ್ನು ರಚಿಸಿ (ಹೌದು ಇದನ್ನು ಅವರು ಅವರ ಪಾಡಿಗೆ ಮಾಡಬಹುದು); ಮಾಹಿತಿ ಮತ್ತು ವಸ್ತುವನ್ನು ಸಂಗ್ರಹಿಸುವುದು, ಪರಸ್ಪರ ಅರ್ಥಮಾಡಿಕೊಳ್ಳಲು ಮತ್ತು ಹೊಸದರ ಚಿಂತನೆಗೆ ನೆರವಾಗುವುದು, ಈ ಮೂಲಕ ಅವರು ಏನು ಮಾಡಬಹುದೋ ಅದನ್ನು ಪರಸ್ಪರ ಅರ್ಥ ಮಾಡಿಕೊಳ್ಳಬಹುದು. ಅವರಿಗೆ ಸಹಾಯ ಮಾಡುವ ಪಾತ್ರ ನಿಮ್ಮದಾಗಿರುತ್ತದೆ. ಅವರು ತಾವಾಗಿ ಇದಕ್ಕಿಂತ ಹೆಚ್ಚಿನದು ಏನು ಮಾಡಬಹುದು ಎಂದು ಯೋಚಿಸುವಂತೆ ಮಾಡಿ. ಉದಾಹರಣೆಗೆ, ಇದರ ಮೌಲ್ಯವೇನು/ಮಹತ್ವವೇನು ಎಂದು ಯೋಚಿಸಿ ಎಂದು ಪ್ರಶ್ನೆ ಕೇಳಿ).-ಮಕ್ಕಳಿಗೆ ನಿಮ್ಮ ಯಾವ ಜವಾಬ್ದಾರಿಯನ್ನು, ತೀರ್ಮಾನವನ್ನು ಮತ್ತು ಪಾತ್ರವನ್ನು ಬಿಟ್ಟುಕೊಡಬಹುದು ಎಂದು ಯೋಚಿಸಿ; ಹಾಗೂ ಅದನ್ನು ಅವರೊಂದಿಗೆ ಚರ್ಚಿಸಿ, ಮಕ್ಕಳು ಆ ನಿರ್ಣಾಯಕ ಪಾತ್ರವನ್ನು ನಿರ್ವಹಿಸುವಂತೆ ಒಂದು ತರಗತಿ ಅಥವಾ ಶಾಲೆಯನ್ನು ನಡೆಸಿ.

-ವಿದ್ಯಾರ್ಥಿಗಳ ಕಾರ್ಯನಿರ್ವಹಣೆಯ ಕುರಿತು ವಿದ್ಯಾರ್ಥಿಗಳು, ಪೋಷಕರು ಮತ್ತು ಸಹಶಿಕ್ಷಕರ ಜೊತೆಗೆ ಚರ್ಚಿಸಿ. ನಿಮ್ಮನ್ನೂ ಒಳಗೊಂಡಂತೆ, ಪ್ರತಿಯೊಬ್ಬರ ಕಾರ್ಯನಿರ್ವಹಣೆಯಲ್ಲಿ ಅಗಬೇಕಾಗಿರುವ ಸುಧಾರಣೆಯ ಕುರಿತೂ ಚರ್ಚಿಸಿ; ನಿಮ್ಮ ಗುರಿಯು, 'ಎಲ್ಲರ ಕಲಿಕೆಯು ಎಲ್ಲರ ಜವಾಬ್ದಾರಿ ಹೇಗಾಗಿರುತ್ತದೆ?' ಎಂಬ ಪ್ರಶ್ನೆಗೆ ಉತ್ತರ ಕಂಡುಕೊಳ್ಳುವುದಾಗಿರುತ್ತದೆ.

-'ಜ್ಞಾನದ ಪಾಲುದಾರ'ನಾಗಿ ಸಮುದಾಯವನ್ನು ಸೇರಿಸಿಕೊಳ್ಳಿ. ಸಮುದಾಯದ ಸದಸ್ಯರ ಅನುಭವಗಳು ಮತ್ತು ಅವರಲ್ಲಿರುವ ಬೇರೆಬೇರೆ ಕ್ಷೇತ್ರಗಳ ಬಗೆಗಿನ ಜ್ಞಾನಗಳನ್ನು ತರಗತಿಗಳಲ್ಲಿ ಹಂಚಿಕೊಳ್ಳಿ. (ಭಾರತದ ಭೌಗೋಳಿಕತೆಯ ಬಗ್ಗೆ ಬೇರೆ ಎಲ್ಲರಿಗಿಂತಲೂ  ಒಬ್ಬ ಟ್ರಕ್ ಚಾಲಕನಿಗೆ ಹೆಚ್ಚಿನ ಜ್ಞಾನವಿರುತ್ತದೆ. ಅಕ್ಕಸಾಲಿಗನು ಲೋಹದಲ್ಲಿನ ಕಶ್ಮಲಗಳನ್ನು ಪ್ರತ್ಯೇಕಿಸಬಲ್ಲ, ನೇಕಾರನು ಸಂಯೋಜನೆಯನ್ನು ಅತ್ಯುತ್ತಮವಾಗಿ ಅರ್ಥೈಸಿಕೊಳ್ಳಬಲ್ಲ). ನಿಮ್ಮ ಸುತ್ತಮುತ್ತ ಸಮೃದ್ಧ ಸಂಪನ್ಮೂಲ ಆವರಿಸಿಕೊಂಡಿದೆ. **ಮೂರನೇ ಹಂತ- ನಿಮ್ಮ ಶಾಲೆಗೆ ಹೊಸ ದೃಷ್ಟಿಕೋನ**

ನೀವು ಈಗ ಆರಂಭಿಕ ಹಂತದ ಎಲ್ಲಾ ಕ್ರಮಗಳನ್ನು ಕೈಗೊಂಡಿದ್ದೀರಿ. ಎಲ್ಲರ ಪಾಲ್ಗೊಳ್ಳುವಿಕೆಯೊಂದಿಗೆ ಮುಂದಡಿಯಿಡಲು ನೀವು ಸನ್ನದ್ಧರಾಗಿದ್ದೀರಿ. ಹಾಗಾಗಿ, ನಿಮ್ಮ ಶಾಲೆಗೆ ದೀರ್ಘಕಾಲೀನ ಗುರಿಯನ್ನು ಸೃಷ್ಟಿಸುವ ಸಲುವಾಗಿ, ವಿದ್ಯಾರ್ಥಿಗಳ ಜೊತೆಗೆ  ಪೋಷಕರು, ಶಾಲಾ ಆಡಳಿತ ಮಂಡಳಿಯನ್ನು (ಎಸ್‌ಎಂಸಿ) ಸೇರಿಸಿಕೊಳ್ಳಲು ಕ್ರಮ ತೆಗೆದುಕೊಳ್ಳಿ.

ನಿಮ್ಮನ್ನು ನೀವೇ ಹೀಗೆ ಪ್ರಶ್ನಿಸಿಕೊಳ್ಳಿ-

ಶಾಲೆಯಲ್ಲಿ ನಿಮಗೆ ಎದುರಾಗಿರುವ ಮತ್ತು ನೀವು ಬಗೆಹರಿಸಬಹುದಾದ ಪ್ರಮುಖ ಸಮಸ್ಯೆಗಳೇನು? (ಉದಾಹರಣೆಗೆ- ಕೆಲವು ಮಕ್ಕಳು ತಮ್ಮ ಸಾಮರ್ಥ್ಯಕ್ಕೆ ತಕ್ಕುದಾಗಿ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುತ್ತಿಲ್ಲ ಅಥವಾ ತಮ್ಮ ಸಾಮರ್ಥ್ಯಕ್ಕೆ ತಕ್ಕುದಾಗಿ ಕಲಿಯುತ್ತಿಲ್ಲ; ಕೆಲವು ಶಿಕ್ಷಕರು ಹೊಸ ಪ್ರಯತ್ನಗಳಲ್ಲಿ ತೊಡಗಿಸಿಕೊಳ್ಳಲು ಆಸಕ್ತಿ ವಹಿಸುತ್ತಿಲ್ಲ; ಕೆಲವು ಪೋಷಕರು ಅವಶ್ಯವಿರುವಷ್ಟು ಪ್ರೋತ್ಸಾಹ ನೀಡುತ್ತಿಲ್ಲ ಇತ್ಯಾದಿ. ಇವೆಲ್ಲವೂ ನಿವಾರಣೆಯಾದರೂ ಶಾಲೆಯಲ್ಲಿ ಆಗಬಹುದಾದ ದೊಡ್ಡ ಬದಲಾವಣೆಗಳೇನು?

-ಫಲಿತಾಂಶವಾಗಿ, ಈಗಿನಿಂದ ಐದು ವರ್ಷಗಳಲ್ಲಿ, ನಿಮ್ಮ ಶಾಲೆಯಲ್ಲಿ ಈಗ ಸಾಧ್ಯವಾಗದೇ ಇರುವ ಯಾವ ಅಂಶವನ್ನು ಸಾಧಿಸಬಹುದು? (ಉದಾಹರಣೆಗೆ, ಪ್ರಾಥಮಿಕ ಶಾಲೆಗಳಲ್ಲಿನ ಸಮಸ್ಯೆಗಳನ್ನು

ಪೋಷಕರೊಂದಿಗೆ ಮಾತನಾಡುವ ಮೂಲಕ ಬಗೆಹರಿಸಿಕೊಳ್ಳಬಹುದು).

- ಜನರು ಇವತ್ತು ಹೇಳದೇ ಇರುವ ಯಾವ ಅಂಶವನ್ನು ಹೇಳಬಹುದು?
- ನಿಮ್ಮ ಮಕ್ಕಳಲ್ಲಿ ಯಾವ ಗುಣಗಳು ಇರಬಹುದು? ಸಮೂಹವಾಗಿ ಅವರು ಹೇಗೆ ಭಿನ್ನವಾಗಿ ಇರಬಹುದು?
- -ಶಿಕ್ಷಕರಲ್ಲಿ ಮತ್ತು ಶಾಲಾ ಮುಖ್ಯಸ್ಥರಲ್ಲಿ ಯಾವ ಕೌಶಲಗಳು ಮತ್ತು ಸಾಮರ್ಥ್ಯಗಳನ್ನು ಕಾಣಬಹುದು? ಅವರೂ ಒಂದು ಸಮೂಹವಾಗಿ ಹೇಗೆ ಭಿನ್ನವಾಗಿ ಇರಬಹುದು?
- ಸಮುದಾಯದ ಪಾತ್ರದಲ್ಲಿ ಯಾವ ಬದಲಾವಣೆಗಳಾಗಬಹುದು? ಅದೊಂದು ಫಲಪ್ರದ ಸಂಬಂಧ ಎಂಬುದನ್ನು ನಮಗೆ ಯಾವುದು ತಿಳಿಸುತ್ತದೆ?
- ನೀವು ಯಾವ ಅಡೆತಡೆ/ತೊಡಕುಗಳನ್ನು ಗೆಲ್ಲಬಹುದು? ಯಾರ ನೆರವಿನಲ್ಲಿ? ಹೇಗೆ?
- ನೀವು (ನಿಮ್ಮ ಸ್ನೇಹಿತರು/ಸಹೋದ್ಯೋಗಿಗಳು/ಸಮುದಾಯ) ಯಾವ ಕ್ರಮವನ್ನು ಕೈಗೊಳ್ಳುತ್ತೀರಿ? ಯಾರ ನೆರವಿನಿಂದ ಮತ್ತು ಹೇಗೆ? ಯಾರು, ಏನು ಮತ್ತು ಯಾವಾಗ ಮಾಡುತ್ತಾರೆ?

ಇವೆಲ್ಲವನ್ನೂ ದೀರ್ಘಕಾಲೀನ ಯೋಜನೆಯನ್ನಾಗಿ ಮಾರ್ಪಡಿಸಿ. ಅದನ್ನು ನೀವು ಮುಂದಿನ ಮೂರು ತಿಂಗಳ ಅವಧಿಯ ಯೋಜನೆಯನ್ನಾಗಿ ಕಾರ್ಯರೂಪಕ್ಕೆ ತನ್ನಿ ಮತ್ತು ಇದಕ್ಕೆ ಪೂರಕವಾಗಿ ಪ್ರತಿಯೊಬ್ಬರೂ ಶ್ರಮಿಸಿ.**ಉಪಸಂಹಾರ**

ಅಂತಹ ಬದಲಾವಣೆಗಳನ್ನು ಮಾಡಲು ತಮಗೆ ಅವಕಾಶ ಸಿಗುವುದಿಲ್ಲ ಎಂದು ಶಿಕ್ಷಕರು ಆಗಾಗ ಹೇಳುತ್ತಿರುತ್ತಾರೆ. ನೆನಪಿಡಿ; ನಾವು ಕೆಟ್ಟದಾಗಿ ಪಾಠ ಮಾಡಲು ಮುಕ್ತರಾಗಿದ್ದೇವೆ ಎಂದಾದರೆ ಸುಧಾರಣೆಗಳನ್ನು ಮಾಡಲೂ ಮುಕ್ತರು ಎಂದರ್ಥ. ಹೆಚ್ಚು ಹೆಚ್ಚು ನಗುವುದರಿಂದ ನಮ್ಮನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ, ಸ್ಥಳೀಯ ಸಾಮಗ್ರಿಗಳನ್ನು ಬಳಸಿಕೊಂಡು (ಎಲೆಗಳು 1, 2, 3, 5, 7 ರಂತೆ ಬೆಳೆಯುತ್ತವೆ, ಅಲ್ಲದೆ ಇದು ಒಂದಕ್ಕೊಂದರ ಗುಣಾಕಾರವಾಗಿರುತ್ತದೆ ಎಂಬುದು ನಿಮಗೆ

ಗೊತ್ತೇ?) ಅಥವಾ ಯಾವುದೋ ಒಂದು ಕತೆಯನ್ನು ಅರ್ಧ ಓದಿ, ಕುತೂಹಲಕರ ಘಟ್ಟದಲ್ಲಿ ನಿಲ್ಲಿಸಿದಂತೆ. ಹೀಗೆ ಮಾಡುವುದರಿಂದ ಕತೆಯ ಉಳಿದ ಭಾಗವನ್ನು ಮಕ್ಕಳು ತಾವಾಗಿ ಓದಿಕೊಳ್ಳುತ್ತಾರೆ. ಇತರ ಉಪಾಯಗಳೆಂದರೆ, ಪ್ರತಿ ವಾರ ಒಂದು ಮಗು/ಒಂದು ಗುಂಪನ್ನು ಇತರರಿಗೆ ಅತಿ ಹೆಚ್ಚು ನೆರವಾದವರು ಎಂಬುದಾಗಿ ಗುರುತಿಸಿ ಎತ್ತಿ ತೋರಿಸುವುದು, ಅತ್ಯಂತ ಕ್ರಿಯಾಶೀಲ ಸವಾಲುಗಳನ್ನು ಕೊಟ್ಟು ಜೊತೆಗೆ ಬಗೆಹರಿಸಲು ಹೇಳುವುದು (ಉದಾಹರಣೆಗೆ, ಒಂದೇ ಕೈ ಬಳಸಿ ತರಗತಿಯ ಎಲ್ಲಾ ಪೀಠೋಪಕರಣಗಳನ್ನು ಮರುಜೋಡಣೆ ಮಾಡುವಂತೆ ಹೇಳುವುದು), ವಿದ್ಯಾರ್ಥಿಗಳಿಗೆ ವೈಯಕ್ತಿಕಕ್ಕಿಂತ ಗುಂಪಾಗಿ ಚಟುವಟಿಕೆಗಳನ್ನು ಕೊಡುವುದು ಇತ್ಯಾದಿ. ಶಿಕ್ಷಕರಾಗಿ ನಾವು ನಮ್ಮ ಪಾಡಿಗೆ ಖುಷಿಪಡುವುದನ್ನು ಮತ್ತು ತರಗತಿ ಮತ್ತು ಶಾಲೆಯಲ್ಲಿ ಕಟ್ಟಬಹುದಾದ ಬೇರೆ ಬೇರೆ ಸಂಬಂಧಗಳಲ್ಲಿ ಪರಿಪೂರ್ಣತೆಸಾಧಿಸುವುದನ್ನು (ಮತ್ತು ಈ ಮೂಲಕ ಕಲಿಯುವುದು) ತಡೆಯಲು ಯಾರಿಂದಲೂ ಸಾಧ್ಯವಿಲ್ಲ.

ಯಾವುದೇ ಪ್ರಕರಣದಲ್ಲಾದರೂ, ಮೇಲೆ ಹೇಳಿರುವ ಎಲ್ಲಾ ಅಂಶಗಳು ರಾಷ್ಟ್ರೀಯ ಶಿಕ್ಷಣ ನೀತಿ 2020ರ ಗುರಿಯೂ ಆಗಿದೆ. ಶಾಲೆಯನ್ನು ಮರುವಿನ್ಯಾಸ/ಮರು ಮಾದರಿಗೊಳಿಸುವ ಹಾಗು ಸಾಮಾಜಿಕ ಜವಾಬ್ದಾರಿಯುಳ್ಳ ಶಾಲೆಯಾಗಿ ರೂಪಿಸಲು ನೀವು ಮುಂದಡಿ ಇಡುವುದು ಎಂದರೆ, ನೀವು ಸ್ವತಃ ಮಾದರಿಯಾಗಿ ಪರಿಗಣಿಸಲ್ಪಡುತ್ತೀರಿ ಎಂದರ್ಥ!

**ಕೊನೆ ಟಿಪ್ಪಣಿ:**

i. Subir Shukla. Why We Need Responsive Schools. Learning Curve. Every Child Can Learn Part 2. April 2020. Issue 7. Pp 92.

ii. For example: https://chachi.app and https://mananbooks.in/downloads/ for material containing activities

**ಸುಬೀರ್ ಶುಕ್ಲಾ ಅವರು ಗ್ರೂಪ್ ಇಗ್ನಸ್ ಮೂಲಕ, ಭಾರತ ಮತ್ತು ಏಷ್ಯಾ ಹಾಗು ಆಫ್ರಿಕಾದ ಇತರ ದೇಶಗಳಲ್ಲಿನ ಅವಕಾಶ ವಂಚಿತ ಮಕ್ಕಳ ಶೈಕ್ಷಣಿಕ ವ್ಯವಸ್ಥೆಯನ್ನು ಸುಧಾರಣೆ ಮಾಡುವ ನಿಟ್ಟಿನಲ್ಲಿ ಶ್ರಮಿಸುತ್ತಿದ್ದಾರೆ. ಈ ಹಿಂದೆ ಅವರು ಡಿಪಿಇಪಿಯಲ್ಲಿ ಮುಖ್ಯ ಸಲಹೆಗಾರರು  ಮತ್ತು ಮಾನವ ಸಂಪನ್ಮೂಲ ಸಚಿವಾಲಯದ ಶೈಕ್ಷಣಿಕ ಗುಣಮಟ್ಟ ಸುಧಾರಣೆ**

ಮತ್ತು ಆರ್‌ಟಿಇ 2009ರಲ್ಲಿ ಡೆವಲಪ್‌ಮೆಂಟ್ ಲೀಡಿಂಗ್ ದಿ ಡೆವಲಪ್‌ಮೆಂಟ್ ಆಫ್ ದಿ ಕ್ವಾಲಿಟಿ ಫ್ರೇಮ್‌ವರ್ಕ್‌ನಲ್ಲಿ ಸಲಹೆಗಾರರಾಗಿದ್ದರು. ನೀತಿ ಆಯೋಗದ ತಜ್ಞರ ಸಮಿತಿ ಸದಸ್ಯರಾಗಿದ್ದರು. ಮನನ್ ಬುಕ್ಸ್ ಮೂಲಕ ಅವರು ಮಕ್ಕಳಿಗಾಗಿ ಹಲವಾರು ಪುಸ್ತಕಗಳನ್ನು ಬರೆದು ಪ್ರಕಾಶನ ಮಾಡುತ್ತಾರೆ. ಚಾಹಕ್ ಎಂಬ ಮಕ್ಕಳಿಗಾಗಿನ ನಿಯತಕಾಲಿಕವನ್ನೂ ಹೊರತರುತ್ತಿದ್ದಾರೆ. ಇತ್ತೀಚೆಗೆ ಅವರು ಸಿಂಗಾಪುರದ ಸ್ಪ್ರಿಂಗರ್‌ನಲ್ಲಿ ಚೈಲ್ಡ್ ಡೆವಲಪ್‌ಮೆಂಟ್ ಅಂಡ್ ಎಜುಕೇಶನ್ ಇನ್‌ಟ್ವೆಂಟಿ ಫಸ್ಟ್ ಸೆಂಚುರಿಗೆ ಸಹ ಸಂಪಾದಕರಾಗಿದ್ದರು. ಸುಬೀರ್‌ಶುಕ್ಲಾ ಅವರ ಸಂಪರ್ಕಕ್ಕೆ- subirshukla@gmail.com